ತಾರೀಖು 21ನೇ ಮೇ 1903.

ನಂ. ರೆ. 4294, ಸ॥1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜೇಷ್ಟ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಬೆಂಗಳೂರ ಡಿಸ್ಟ್ರಿಕ್ಟಿನ ಲ್ಲಿರುವ ಚನ್ನಪಟ್ಣ ಟವನಿನ ಒಡಾವಣಿಗೋಸ್ಕರ ಪೇಕಾಗಿರುತ್ತದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೇ ಸೆಕ್ಷನ್ ಅನುಸರಿಸಿ ಬೆಂಗಳೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಮಾಲೀಕರ ಹೆಸರು.	ಏನು.	ಏನ್ಟೆಂಟ್. ಎ.	ಏನ್ಟೆಂಟ್. ಗು.	ಚಕ್ಕುಬಂದಿ. ಪೂರ್ವ.	ಚಕ್ಕುಬಂದಿ. ಪಶ್ಚಿಮ.	ಚಕ್ಕುಬಂದಿ. ಉತ್ತರ.	ಚಕ್ಕುಬಂದಿ. ದಕ್ಷಿಣ.	ಷರಾ.
ಬೆಂಗಳೂರು	ಚನ್ನಪಟ್ಣ	ಕೂಚಿಗನಹಳ್ಳಿ	ರಾಯಶೆಟ್ಟಯ ಹೆಂಡತಿ ಲಿಂಗವ್ವ.	ಸರ್ವೆ ನಂ. 104 ಖುಷ್ಕಿ	....	28	ಚನ್ನಪಟ್ಣ ಪೂರ್ವ	ಸರ್ಕಾರದ್ದು	ಚನ್ನಪಟ್ಣ ಪೂರ್ವ	ಚನ್ನಪಟ್ಣ ಪೂರ್ವ	ತಗದುಕೊಳ್ಳುವ ಬಗ್ಗೆ ಕೊಡುವ ನೋಟೀಸಿನಲ್ಲಿ ನಮೂದಿಸಿರುವ ನೋಟೀಸಿನಗಳ ವಿಷಯದ ಬಗ್ಗೆ ಕೊಡತಕ್ಕ ದ್ದು.

ತಾರೀಖು 28ನೇ ಮೇ 1903.

ನಂ. ರೆ. 4364, ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರಾದ ಮೆ॥ ವಿ. ರಂಗಾಚಾರ್ರಿಗೆ 203 (b)ನೇ ಆರ್ಟಿಕಲ್ ಅನುಸರಿಸಿ 1903ನೇ ಏಪ್ರೆಲ್ 7ನೇ ಮಕ್ತುಂ ರೆ. 3846ನೇ ನಂಬರಿ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 1 ತಿಂಗಳ ಪ್ರಿವಿಲೇಜ್ ರಜಾ ಇನ್ನೂ 29 ದಿನಗಳು ಜಾಸ್ತಿ ಮಾಡಲ್ಪಟ್ಟಿರುತ್ತದೆ.

ತಾರೀಖು 29ನೇ ಮೇ 1903.

ನಂ. ರೆ. 4398, ಮೈಸೂರು ಸರ್ವಿಸ್ ರೆಗ್ಯುಲೇಷ್ಟಗಳ 188ನೇ ಆರ್ಟಿಕಲ್ ಅನುಸರಿಸಿ ಹಾಸನದ ಡಿಸ್ಟ್ರಿಕ್ಟು ಚನ್ನರಾಯಪಟ್ಟಣದ ತಾಲ್ಲೂಕಿನ ಅಮಲ್ದಾರ್ರಾದ ಮೆ॥ ಎ. ವೇದಾಂತ ದೇಸಿಗಂ ಅಯ್ಯಂಗಾರ್ರಿಗೆ 1903ನೇ ನೇ 20ನೇ ತಾರೀಖಿನ ಲಾಗಾಯತ್ತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 1½ ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

2. ಹಾಸನದ ಡಿಸ್ಟ್ರಿಕ್ಟು ಸಿರಿಸ್ತೆದಾರ್ರಾದ ಬಿ. ಟಿ. ಸೀತಾರಾಮಯ್ಯನವರು ಸದರೀ ಅಮಲ್ದಾರ್ರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಯಂತ, ಚನ್ನರಾಯಪಟ್ಣದ ತಾಲ್ಲೂಕಿನ ಅಮಲ್ದಾರ್ ವ ಮೂರನೇ ಕ್ಲಾಸು ಮ್ಯಾಜಿಸ್ಟ್ರೇಟರುಗಿ ಆಕ್ಟಿಂಗ್ ವೊಕರರ್ರಾಡಲ್ಪಟ್ಟಿರುತ್ತಾರೆ.

ಹುಕುಂ ಬವೋಜೇಬ್,
ಹೆಚ್. ವಿ. ನಂಜುಂಡಯ್ಯ,
ಜನರಲ್ ವ ರೆವಿನ್ಯೂ ಇಲಾಖೆಗಳ ಮೈಸೂರ ಗವರ್ನಮೆಂಟ್ ಸೆಕ್ರಿಟೆರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮಾ.

ತಾರೀಖು 1ನೇ ಜೂ॥ 1903.

ನಂ. 532—2824, ಸ್ಯಾನಿಟೆರಿ ರೇಂಜಿನ ಅಸಿಸ್ಟೆಂಟ್ ಇಂಜನಿಯರಾದ ಮೆ॥ ಆರ್. ವಿ. ಸುಂದರಂ ಅಯ್ಯರ್, ಬಿ. ಎ., ಬಿ. ಸಿ. ಇ., ಯವರಿಗೆ ಮಾಹೆ ಮಜಕೂರು 2ನೇ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬವೋಜೇಬ್,
ಡಬ್ಲ್ಯೂ. ಮೆಕಹರ್ಕ್,
ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರ ಗವರ್ನಮೆಂಟ್ ಸೆಕ್ರಿಟೆರಿ.

ಮಿಲಿಟೆರಿ.

ಇಸ್ತಿಹಾರ್ನಾಮಾ.

ತಾರೀಖು 30ನೇ ಮೇ 1903.

ನಂ. 2768, ಮೈಸೂರು ಸೀಮೆಯ ಫೌಜವನ್ನೆಲ್ಲಾ ಧರಿಸಿದ ಶ್ರೀಮನ್ಮಹಾರಾಜಾ ಸರ್ಕಾರದವರು ಮೈಸೂರು ಪೈದಲ್ ಫೌಜಿನ 3ನೇ ಪಟೂಲಂನಲ್ಲಿ 2ನೇ ಗ್ರೇಡಿನ ಜಮೇದಾರನ್ನಾಗಿ ಎಸ್. ಅಬ್ದುಲ್ ಅಜೀಜ್‌ಖಾನ್ ಯವರ ಮೊಕರೂರಾತಿಯನ್ನು ಅವರು ಕೆಲಸಕ್ಕೆ ದಾಖಲಾಗುವ ತಾರೀಖಿನಾರಭ್ಯ ಮಂಜೂರ್ಮಾಡಿರುತ್ತಾರೆ.

ಹುಕುಂ ಬವೋಜೇಬ್,
ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟೆರಿ ಅಸಿಸ್ಟೆಂಟ್.